ಈ ಬಗ್ಗೆ ಆಲೋಚನೆಯನ್ನು ಮಾಡುತ್ತಿಲ್ಲ. ಅಲ್ಲದೇ ಈಗಾಗಲೇ ಪುರಸಭೆಗಳಿಗೆ ೨೯ನೇ ಏಪ್ರಿಲ್ ೧೯೯೦ ರಂದು ಚುನಾವಣೆ ಎಂದು ಘೋಷಣೆಯನ್ನು ಮಾಡಿರುವುದರಿಂದ ಈ ವಿಚಾರವನ್ನು ಸರ್ಕಾರ ಪುನಃ ಆಲೋಚನೆ ಮಾಡಲಿಕ್ಕೆ ಸದ್ಯದ ಮಟ್ಟಿಗೆ ಆಗುವುದಿಲ್ಲ.

೪. ನೀರಾವರಿ ದರವನ್ನು ಹೆಚ್ಚಿಸಿರುವುದರಿಂದ ಸಣ್ಣ ಅತಿಸಣ್ಣ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ನೀರಾವರಿ ಜಮೀನಿಗೆ ಎಕರೆ ಒಂದಕ್ಕೆ ವರ್ಷಕ್ಕೆ ಭತ್ತಕ್ಕೆ ಹಿಂದೆ ಇದ್ದ ರೂ. ೪೦.೦೦ ದರವನ್ನು ರೂ ೧೦೦.೦೦ಗೆ ಹೆಚ್ಚಿಸಿರುವುದರಿಂದಲೂ ಮತ್ತು ಕಬ್ಬಿಗೆ ಎಕರೆ ಒಂದಕ್ಕೆ ಹಿಂದೆ ಇದ್ದರೂ. ೧೫೦-೦೦ ದರವನ್ನು ರೂ. ೪೦೦-೦೦ಕ್ಕೆ ಹೆಚ್ಚಿಸಿ ದಿನಾಂಕ ೧-೧-೧೯೯೦ರಿಂದ ಜಾರಿಗೆ ಬರುವಂತೆ ಹೊರಡಿಸಿರುವ ಸರ್ಕಾರಿ ಆದೇಶದಿಂದ ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ತುಂಬಾ ತೊಂದರೆಯಾಗಿರುವುದರಿಂದ ಹಿಂದೆ ಇದ್ದ ದರವನ್ನೇ ಮುಂದುವರಿಸಿಕೊಂಡು ಹೋಗಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

೧-೦೦ ಪಿ.ಎಂ

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪಿ-೨) ದಿ. ೩೧-೧೨-೮೯ ರಂತೆ ನೀರಾವರಿ ದರಗಳನ್ನು ಪುನರ್ವಿಮರ್ಶಿಸಿ ದಿನಾಂಕ ೧. ೧ ೯೯ ರಿಂದ ಜಾರಿಗೆ ಬರುವಂತೆ ಆದೇಶವನ್ನು ಹೊರಡಿಸಲಾಗಿದೆ. ಕರ್ನಾಟಕ ನೀರಾವರಿ (ನೀರಿನ ದರ) ನಿಯಮಾವಳಿ, ೧೯೭೩ಕ್ಕೆ ಅವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ಈ ಆದೇಶದಲ್ಲಿ ತಿಳಿಸಲಾಗಿತ್ತು.

ಉದ್ದೇಶಿತ ತಿದ್ದುಪಡಿಗಳನ್ನೊಳಗೊಂಡ ಕರಡು ಅಧಿಸೂಚನೆಯನ್ನು ದಿ: ೨.೨.೯೦ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ದಿ. ೧೫-೩-೯೦ ರೊಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆಯ ಮೇರೆಗೆ ಸಾರ್ವಜನಿಕರಿಂದಲೂ ರೈತರಿಂದಲೂ ಸಂಘ ಸಂಸ್ಥೆಗಳಿಂದಲೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಈ ಆಕ್ಷೇಪಣೆಗಳು; ಸಲಹೆಗಳು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿವೆ, ಆದುದರಿಂದ ಕರ್ನಾಟಕ ನೀರಾವರಿ (ನೀರಾವರಿ ವಿಧಿಸುವಿಕೆ) ನಿಯಮಾವಳಿ ೧೯೭೩ಕ್ಕೆ ತಿದ್ದುಪಡಿಮಾಡಲಾದ ಅಂತಿಮ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಈವರೆವಿಗೆ ಹೊರಡಿಸಿರುವುದಿಲ್ಲ. ಈ ಕಾರಣದಿಂದ ಪುನರ್ವಿಮರ್ಶಿತ ನೀರಿನದರಗಳು ಇನ್ನೂ ಜಾರಿಗೆ ಬಂದಿರುವುದಿಲ್ಲ.

ಆದರೂ ಸಹ, ಈ ವಿಷಯದ ಬಗ್ಗೆ ಸ್ಪಷ್ಟನೆ ನೀಡುವ ಸಲುವಾಗಿ, ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಂಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವವರೆವಿಗೂ ಸರ್ಕಾರದ ಹಿಂದಿನ ಆದೇಶ ಸಂಖ್ಯೆ ಆರ್ ೩೫ ಇ.ಡಬ್ಲ್ಯೂ ಆರ್ ೮೩ ದಿ:೨೪.೭.೮೫ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪಿ) ದಿ: ೪.೧೦.೮೭ರಲ್ಲಿ ನಿಗದಿಗೊಳಿಸಲಾಗಿರುವ ಹಿಂದಿನ ನೀರಿನದರಗಳನ್ನೇ ವಿಧಿಸಬೇಕೆಂದು ಸರ್ಕಾರದ ಸುತ್ತೋಲೆ ಸಂಖ್ಯೆ ಪಿಡಬ್ಲ್ಯೂಡಿ ೮೯ ಎನ್‌ಪಿಸಿ ೮೫ (ಪ—೨) ದಿ: ೧೧-೩-೯೦ರಲ್ಲಿ ಸೂಚನೆ ನೀಡಲಾಗಿದೆ.

ಈ ಸುತ್ತೋಲೆಯು ಪ್ರತಿಗಳನ್ನು ನೀರಾವರಿ ಇಲಾಖೆಯ ಎಲ್ಲಾ ಮುಖ್ಯ ಎಂಜಿನಿಯರುಗಳಿಗೂ ರೆವಿನ್ಯೂ ವಿಭಾಗದ ಎಲ್ಲಾ ವಿಭಾಗಾಧಿಕಾರಿಗಳಿಗೂ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಳುಹಿಸಿಕೊಡಲಾಗಿದೆ. ನೀರಾವರಿ ಮತ್ತು ಕಂದಾಯ ಇಲಾಖೆಗಳ ಎಲ್ಲಾ ಅಧಿಕಾರಿಗಳ ಗಮನಕ್ಕೆ ಈ ಸೂಚನೆಗಳನ್ನು ತರಬೇಕೆಂದೂ ಆದೇಶಿಸಲಾಗಿದೆ.

೫. ಕೋಣನೂರಿನ ಪ್ರಥಮ ದರ್ಜೆಕಾಲೇಜು ಪ್ರಾಂಶುಪಾಲರ ಮೇಲೆ ವಿಚಾರಣೆ

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) —ಮಾನ್ಯ ಅಧ್ಯಕ್ಷರೆ, ಅರಕಲಗೂಡು ತಾಲೂಕಿನ ಕೋಣನೂರಿನ ಬಿ. ಎಂ ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಇದೇ ತಿಂಗಳು ೮ನೇ ತಾರೀಖು ಕಾಲೇಜಿನಿಂದ ಅನಧಿಕೃತವಾಗಿ ಗೈರು ಹಾಜರಾಗಿದ್ದಾಗ್ಯೂ, ಹಾಜರಿ